

# ಲಿಪ್‌ಸ್ಟಿಕ್ ಹಚ್ಚುವ ಮುನ್ನ..

**ದಿನವೂ ಲಿಪ್‌ಸ್ಟಿಕ್ ಬಳಸಿದರೆ ತುಟಿ ತನ್ನ ಎಂದಿನ ಕಳೆಯನ್ನು ಕಳೆದುಕೊಳ್ಳುತ್ತದೆ. ಹಚ್ಚಲೇ ಬೇಕು ಎಂಬ ಅನಿವಾರ್ಯ ಇದ್ದರೆ ಮೊದಲು ಲಿಪ್ ಬಾಮ್ ಬಳಸಿ ಆದರ ಮೇಲೆ ಮೃದುವಾಗಿ ತೆಳುವಾಗಿ ಲಿಪ್‌ಸ್ಟಿಕ್ ಹಚ್ಚಬೇಕು.**

★ ಹರೀಶ್ ಕುಮಾರ್ ಅಳವಂಡಿ

ಟಿ.ವಿ ಹಾಕಿದಾಕ್ಷಣ ನಿಮ್ಮದೇ ನೆಚ್ಚಿನ ನಟ ನಟಿಯರು ವಿವಿಧ ಬ್ರಾಂಡ್‌ಗಳ ಲಿಪ್‌ಸ್ಟಿಕ್‌ಗಳನ್ನು ಹಿಡಿದುಕೊಂಡು ಪ್ರತ್ಯಕ್ಷರಾಗಿ ಬಿಡುತ್ತಾರೆ. ಮಾಧುರಿ, ಐಶ್ವರ್ಯ, ವಿದ್ಯಾ ಬಾಲನ್ ಳ ನಸುಗೆಂಪಿನ ತುಟಿ, ಸುಕ್ಕಿಲ್ಲದ ತ್ವಚೆ, ಎಲ್ಲವನ್ನೂ ನೀವು ಕೆಲ ದಿನಗಳಲ್ಲೋ, ವಾರಗಳಲ್ಲೋ ಪಡೆಯ ಬಹುದು ಎಂಬುದನ್ನು ಅವರ ಬಾಯಲ್ಲೇ ಎಷ್ಟು ಸಲ ಕೇಳಿಲ್ಲ? ಈ ಕಥೆಗೆ ಇನ್ನೊಂದು ಮುಖವಿದೆ, ಎಷ್ಟು ಜನ ಅವರು ತೋರಿಸುವ ರೆಡ್ ಹಾಟ್ ಲಿಪ್‌ಸ್ಟಿಕ್‌ಗಳನ್ನು ಹಚ್ಚಿಕೊಂಡು ತಮ್ಮ ಕೆಂಗುಲಾಬಿ ತುಟಿಗಳಿಂದ ಸಂತುಷ್ಟರಾಗಿದ್ದಾರೆ? ಹಾಗೆ ನೋಡ ಹೊರಟರೆ ಸಿಗುವ ಉತ್ತರ ಋಣಾತ್ಮಕವೂ ಅಲ್ಲದೇ ಭಯಾನಕವೂ ಹೌದು..! ಸುಂದರವಾಗಿ ಕಾಣಬೇಕೆನ್ನುವ ಭ್ರಮೆ ನಮ್ಮನ್ನು ಎಂಥ ಗಂಡಾಂತರಕ್ಕೆ ಒಡ್ಡುತ್ತಿದೆ ಎಂಬುದನ್ನು ಬಹುಶಃ ನಾವು ಊಹಿಸಲಾಗದು.

ಚೆನ್ನಾಗಿ ಡ್ರೆಸ್ ಮಾಡಿ ಮೇಕಪ್ ಮಾಡಿ, ತುಟಿಯೂ ರಂಗಿನಿಂದ ಕೂಡಿರಲಿ ಎಂದು ಲಿಪ್‌ಸ್ಟಿಕ್ ಹಚ್ಚಿರುತ್ತೇವೆ. ಲಿಪ್‌ಸ್ಟಿಕ್ ಬಣ್ಣ ಬೇಗನೇ ಮಾಸದಿರಲು ತುಟಿಗೆ ಹಚ್ಚಿದ ಬಣ್ಣ ತುಂಬಾ ಹೊತ್ತಿನವರೆಗೆ ಇರಲು ರಾತ್ರಿ ಲಿಪ್‌ಸ್ಟಿಕ್ ಅನ್ನು ಫ್ರಿಜ್‌ನಲ್ಲಿಟ್ಟು ಬೆಳಿಗ್ಗೆ ಹಚ್ಚಿ, ಹೀಗೆ ಮಾಡಿದರೆ ಲಿಪ್‌ಸ್ಟಿಕ್ ಬೇಗನೆ ಮಾಸುವುದಿಲ್ಲ. ಲಿಪ್‌ಸ್ಟಿಕ್ ಹಚ್ಚುವ ಮುನ್ನ ತುಟಿಗೆ ಪೌಡರ್ ಹಚ್ಚಿ, ನಂತರ ಹಚ್ಚಿದರೆ ಬಣ್ಣ ತುಟಿಯ ಮೇಲೆ ತುಂಬಾ ಹೊತ್ತಿನವರೆಗೆ ಇರುತ್ತದೆ. ಮೊದಲು ಲಿಪ್ ಲೈನರ್ ಹಚದ್ಚಿ ನಂತರವೇ ಲಿಪ್‌ಸ್ಟಿಕ್ ಹಚ್ಚಿ. ಲಿಪ್‌ಸ್ಟಿಕ್ ಅನ್ನು ದಿನವೂ ಬಳಸುವುದು ಒಳ್ಳೆಯದಲ್ಲ. ದಿನಾ ಬಳಸಿದರೆ ತುಟಿ ತನ್ನ ಎಂದಿನ ಕಳೆಯನ್ನು ಕಳೆದುಕೊಳ್ಳುತ್ತದೆ. ಆದರೂ ಹಲವರಿಗೆ ದಿನವೂ ಬಳಸುವುದು ಅನಿವಾರ್ಯವಾಗಿರುತ್ತದೆ. ಇದು ನಿಮ್ಮ ತುಟಿಯ ಚರ್ಮವನ್ನು ಹಾಳು ಮಾಡುತ್ತದೆ. ಇನ್ನೂ ಕೆಲವರು ಲಿಪ್‌ಸ್ಟಿಕ್ ಬಳಸಿದರೂ ಬಳಸಲು ಸರಿಯಾದ ಕ್ರಮ ತಿಳಿದಿರುವುದಿಲ್ಲ. ಹಾಗಾಗಿ ಅಂಥವರು ಮೊದಲು ಲಿಪ್ ಬಾಮ್ ಬಳಸಿ ಅದರ ಮೇಲೆ ತೆಳುವಾಗಿ ಲಿಪ್‌ಸ್ಟಿಕ್ ಹಚ್ಚಬೇಕು.

## ಲಿಪ್‌ಸ್ಟಿಕ್ ಆಯ್ಕೆ ಹೇಗಿರಬೇಕು?

ಲಿಪ್‌ಸ್ಟಿಕ್ ಆಯ್ಕೆಯ ಗೊಂದಲ ಹಲವರಲ್ಲಿರುತ್ತದೆ. ಹಾಗಾಗಿ ತಮಗೆ ಹೊಂದದ ಲಿಪ್‌ಸ್ಟಿಕ್ ಕೊಂಡು ಆಮೇಲೆ ಪೇಚಾಟ ಅನುಭವಿಸುವವರು ಹೆಚ್ಚು. ತೆಳು ಪಿಂಕ್ ಬಣ್ಣ ನಿಮ್ಮದಾಗಿದ್ದರೆ ಚೆರ‍್ರಿ ರೆಡ್ ಬಣ್ಣದ ಲಿಪ್‌ಸ್ಟಿಕ್ ಆರಿಸಬಹುದು. ಬೆಳ್ಳಗಿನ ಮೈ ಬಣ್ಣ ನಿಮ್ಮದಾಗಿದ್ದರೆ ತೆಳು ಪಿಂಕ್, ತೆಳು ಹವಳದ ಬಣ್ಣದ ಲಿಪ್‌ಸ್ಟಿಕ್ ಆರಿಸಿ, ಗೋಧಿ ಬಣ್ಣದವರು ನೀವಾಗಿದ್ದರೆ ಸ್ವಲ್ಪ ಡಾರ್ಕ್ ಕಲರ್ ಲಿಪ್‌ಸ್ಟಿಕ್‌ಗಳ ಮೊರೆ ಹೋಗಬೇಕು. ಕಪ್ಪು ಬಣ್ಣ ನಿಮ್ಮದಾದರೆ ಅಂಥವರು ಡೀಪ್ ರೆಡ್ ಬಣ್ಣದ ಅಥವಾ ಚಾಕೊಲೇಟ್ ಬಣ್ಣ, ಕಂದು ಕೆಂಪು ಬಣ್ಣವಿರುವ ಲಿಪ್‌ಸ್ಟಿಕ್ ಆರಿಸಿ, ಆದರೆ ನಿಮ್ಮ ಉಡುಪಿನ ಬಣ್ಣಕ್ಕೆ ಲಿಪ್‌ಸ್ಟಿಕ್ ಮ್ಯಾಚ್ ಮಾಡುವ ಸಾಹಸ ಬೇಡ.

ತುಟಿಯ ಅಂದವನ್ನು ಹೆಚ್ಚಿಸುವ ಲಿಪ್‌ಸ್ಟಿಕ್‌ಗಳು ಋತುವಿಗೆ ತಕ್ಕಂತೆ ಬದಲಾಗುತ್ತವೆ. ಅವುಗಳನ್ನು ಅರಿತು ಬದಲಾಯಿಸುತ್ತಾ ಬಳಸುತ್ತಿರಬೇಕು. ಆಗ ನಿಮ್ಮ ಸೌಂದರ್ಯ ಮತ್ತಷ್ಟು ಅರಳುತ್ತದೆ. ಅಂದವಾಗಿ ಕಾಣಬೇಕು ಎಂದು ಬಯಸುವ ಎಲ್ಲಾ ಮಹಿಳೆಯರು ಋತುಮಾನಕ್ಕೆ ಅನುಗುಣವಾಗಿ ತುಟಿ ಬಣ್ಣ ಆಯ್ಕೆ ಮಾಡುವ ಕುರಿತು ಜಾಗ್ರತರಾಗಿರಬೇಕು. ಅಂದಗೆಡಿಸುವ ತುಟಿ ಬಣ್ಣದ ಬಗ್ಗೆ ತಿಳಿದುಕೊಂಡಿರಬೇಕು. ನಿಯಾನ್ ಛಾಯೆಯ ಬಣ್ಣಗಳು ಮಾನ್ಸೂನ್ ಗೆ ಅತ್ಯುತ್ತಮ ಆಯ್ಕೆ. ಅದರಲ್ಲೂ ಹವಳಗೆಂಪು ಮತ್ತು ಹಾಟ್ ಪಿಂಕ್ ಮತ್ತು ಗಾಢ ಕೆಂಪು ಬಣ್ಣದ ತುಟಿ ರಂಗು ಧರಿಸುವ ಎಲ್ಲ ವಸ್ತ್ರಗಳಿಗೂ ಅತ್ಯುತ್ತಮವಾಗಿ ಹೊಂದುತ್ತವೆ.

ಖಾಸಗಿ ಸಮೀಕ್ಷೆಯ ಪ್ರಕಾರ ಜನರ ಕೊಳ್ಳುವ ಶಕ್ತಿ ಹೆಚ್ಚಿದ್ದು ಮತ್ತು ಜನರ ಸೌಂದರ್ಯ ಪ್ರೀತಿಯೂ ಹೆಚ್ಚಾಗುತ್ತಿರುವ ಕಾರಣ ಈ ಮಾರುಕಟ್ಟೆಯು ವಿಸ್ತಾರವಾಗಲಿದೆ. ಹಾಗಾಗಿ ಲಾಭ ಗಳಿಕೆಯೇ ಮಂತ್ರವಾಗಿರುವ ಮಾರುಕಟ್ಟೆಯಲ್ಲಿ ಎಲ್ಲ ಕಡೆಗಳಲ್ಲಿ ಆಗುವ ಹಾಗೆ ಮೌಲ್ಯಗಳ ಕುಸಿತವೂ ಆಗತೊಡಗಿದೆ. ನಾವು ಬಳಸುತ್ತಿರುವ ಎಷ್ಟೋ ಲಿಪ್‌ಸ್ಟಿಕ್‌ಗಳಲ್ಲಿ ಸೀಸ, ಪಾದರಸ, ಕ್ಯಾಡ್ಮಿಯಂ, ಮ್ಯಾಂಗನೀಸ್‌ನಂತಹ ಭಾರ ಲೋಹಗಳು ಹೆಚ್ಚು ಪ್ರಮಾಣದಲ್ಲಿ ಸೇರಿಕೊಂಡು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಹಲವಾರು ಜನಪ್ರಿಯ ಲಿಪ್‌ಸ್ಟಿಕ್‌ಗಳು ವಿಷಯುಕ್ತ ಲೋಹದ ಅಂಶಗಳಿಂದ ಕೂಡಿರುತ್ತವೆ. ಸೌಂದರ್ಯ ಸಾಧನಗಳಲ್ಲಿ ಲೋಹದ ಅಂಶಗಳಿರುವುದನ್ನು ಹಿಂದೆಯೂ ಹಲವಾರು ಅಧ್ಯಯನಗಳು ದೃಢಪಡಿಸಿವೆ. ಲಿಪ್‌ಸ್ಟಿಕ್‌ಗಳಾಗಲೀ, ಲಿಪ್‌ಗ್ಲೋಸ್‌ಗಳಾಗಲೀ ಕೇವಲ ಚುಂಬನದ ಕುರುಹುಗಳಾಗಿ ತುಟಿಯ ಮೇಲ್ಪದರದಲ್ಲಿ ಮಾತ್ರವೇ ಇರಲಾರವು, ಅವುಗಳು ತುಟಿಯ ಚರ್ಮದ ಮೂಲಕ ದೇಹದೊಳಕ್ಕೆ ಸ್ವಲ್ಪ ಸ್ವಲ್ಪವೇ ಹೀರಲ್ಪಡುತ್ತವೆ ಎಂದಿದ್ದಾರೆ ಸಂಶೋಧಕರು.

ಲಿಪ್‌ಸ್ಟಿಕ್ ಹಚ್ಚುವ ಮುನ್ನ ಎಚ್ಚರವಿರಲಿ..!